
# ಖಾಲಿ ಕುರ್ಚಿ



ಗುಂಡು
ಮೈ ಮೇಲಿನ ಗಾಳಿಯನ್ನು ಚಿಂದಿ ಮಾಡಿ
ಕ್ಷಣದಲೇ
ಭಯದಿಂದ ನೆಲ ಕಚ್ಚಿತು

ನಂತರವದು
ಎರಗಿತು
ರೆಕ್ಕೆ ಬಿಚ್ಚುತಾ
ಅಷ್ಟೇ ರಭಸವಾಗಿ
ಅವಳ ಮೇಲೆ

ಯಾಕೆ?

ಇಷ್ಟೊಂದು ಬೇಕಾ ಬಿಟ್ಟಿ
ದೇಹಗಳ ನಡುವೆ
ಅವಳೇ ಯಾಕೆ?

ಅಥವಾ
ಅವಳು ಯಾಕಾಗಬಾರದು?

ಅವಳ ವಯಸ್ಸು ಕೇವಲ ಎರಡು
ಹೆಸರು ಜೂಲಿಯನ್ ನಲ್ವಾಂಗ

ಈ ತಾಯ್ನೆಲದ ಹುಚ್ಚುತನವ
ತನ್ನ ಪುಟ್ಟ ಪಾದದಡಿ ಬಿಟ್ಟು
ಬೆಚ್ಚಗಿನ ತಾವಿಗೆ ಹೊರಟ ಅದೃಷ್ಟವಂತೆ

ಅವಳ ತಾಯಿ ಇದನ್ನು ಒಪ್ಪಲು ತೈಯಾರೇ ಇಲ್ಲ

ನ್ಯಾಯಾಲಯದ ಭವ್ಯ ಕಟ್ಟಡವ ನೋಡುತ್ತಾ
ಮತ್ತೆ ವರಾಂಡದತ್ತ ದಾಪುಗಾಲಿನ ಹೆಜ್ಜೆ ಹಾಕುತ್ತಾಳೆ
ದುಡಿಯಲು ಮನೆಯಿಂದ ಹೊರ ಹೋಗುವುದೇ
ಅಪರಾಧವಾಗಿದ್ದ
2011ನ್ನು ನೆನಪಿಸಿಕೊಳ್ಳುತ್ತಾಳೆ

ಖಾಲಿ ಕಟಕಟೆಯಿಂದ
ಅವಳ ಕಣ್ಣುಗಳು ಚಲಿಸುತ್ತವೆ
ಖಾಲಿ ಕುರ್ಚಿಯೆಡೆಗೆ

ಖಾಲಿ ಕುರ್ಚಿ ಈಗ
ನ್ಯಾಯಾಧೀಶನ ನಿಲುವಂಗಿ ತೊಟ್ಟು ಕೂತಿದೆ

ಆದರೂ ಕಾಯುತ್ತಾಳೆ...



ಕಲೆ: ಬಸವರಾಜ ಕಲೆಗಾರ